ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY
Azadi Ka Amrit Mahotsav

NAAC Accredited with "A" Grade 2022
ಸಿಂಡಿಕೇಟ ವಿಭಾಗ

ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-73/2026-27/ 93 ದಿನಾಂಕ: 27 AUG 2026

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ 2026-27ನೇ ಸಾಲಿನ 03 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 13 ಆಗಸ್ಟ್, 2026 ರಂದು ಮುಂಜಾನೆ 11:00 ಗಂಟೆಗೆ** ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಶ್ರೀ. ಸಂಜಯ ಕಪಟಕರ, ಧಾರವಾಡ | ಸದಸ್ಯರು |
| 3) | ಶ್ರೀ. ಸದಾನಂದ ಚಿಂತಾಮಣಿ, ಕಲಘಟಗಿ | ಸದಸ್ಯರು |
| 4) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 5) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 6) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 7) | ಡಾ. ಎಸ್. ವಿ. ವಸ್ತ್ರದ, ಪ್ರಾಚಾರ್ಯರು, ಅಂಕೋಲಾ | ಸದಸ್ಯರು |
| 8) | ಡಾ(ಶ್ರೀಮತಿ). ಎಚ್. ಎಸ್. ಅನುಪಮ, ಹೊನ್ನಾವರ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 9) | ಶ್ರೀ. ಮಹೇಶ ವಾಯ್. ಹುಲೆನ್ನವರ, ಧಾರವಾಡ | ಸದಸ್ಯರು |
| 10) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 11) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 12) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 13) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 14) | ಡಾ(ಶ್ರೀಮತಿ), ಎಸ್. ಬಿ. ಮುನೋಳಿ, ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 15) | ಡಾ. ಎ. ಎಮ್. ಕಡಕೋಳ, ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 16) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 17) | ಡಾ. ಎನ್. ರಾಮಾಂಜನೇಯಲು, ಪ್ರಭಾರ ಕುಲಸಚಿವರು (ಆಡಳಿತ) ಮತ್ತು ಡೀನರು ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 17 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 15 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಸಭೆಯ ಅಧ್ಯಕ್ಷರಾದ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿ, ಸಭೆಯ ಕಲಾಪವನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

H. Ramul
**ಕುಲಸಚಿವರು**

AKhan
**ಕುಲಪತಿಗಳು**

<table>
<tr><th>ಕಾರ್ಯಸೂಚಿ ಸಂಖ್ಯೆ</th><th>ವಿಷಯ</th></tr>
<tr><td>1)</td><td>A) ದಿನಾಂಕ 13.05.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ</td></tr>
<tr><td></td><td>ದಿನಾಂಕ 13.05.2026ರ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯ ಕಾರ್ಯಸೂಚಿ ಸಂಖ್ಯೆ 18ರ ಬಗ್ಗೆ ಚರ್ಚಿಸಲಾಗಿ, ವಿಶ್ವವಿದ್ಯಾಲಯದಲ್ಲಿ ಇದ್ದ ಆರ್ಡಿನೆನ್ಸ್ ಪ್ರಕಾರ ವಿಶ್ವವಿದ್ಯಾಲಯದ ಪರೀಕ್ಷಾ ಅವ್ಯವಹಾರಗಳ ಬಗ್ಗೆ ತನಿಖೆ ನಡೆಲಾಗುವುದು ಎಂದು ತಿಳಿಸಿ, ಕುಲಸಚಿವ (ಪರೀಕ್ಷಾಂಗ) ಅವರು ಡಾ. ಆರ್.ಎಂ. ಕಾಂಬಳೆ ಅವರ ವಂಶಾವಳಿಯನ್ನು ತರಿಸಿ, ವಿದ್ಯಾರ್ಥಿಯು ನೇರ ಸಂಬಂಧಿ ಹೌದೇ ಅಥವಾ ಅಲ್ಲವೇ ಎಂದು ಖಚಿತಪಡಿಸಿಕೊಂಡು ನೇರ ಸಂಬಂಧಿಯಾಗಿದ್ದರೆ, ಸದರಿಯವರು ಆ ವರ್ಷ ಪ್ರಶ್ನೆಪತ್ರಿಕೆ ತಯಾರಿಸಿದ್ದಾರೆಯೇ? ಅಥವಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಂಡು ಸದರಿಯವರ ವಂಶಾವಳಿ ದೊರೆತ ಕೂಡಲೇ 15 ದಿನಗಳ ಒಳಗಾಗಿ ವರದಿಯನ್ನು ಸಲ್ಲಿಸಲು ತೀರ್ಮಾನಿಸಿತು. ಮುಂದುವರೆದು ಉಳಿದ ಎಲ್ಲ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮದ ಸಂಕ್ಷಿಪ್ತ ವರದಿಯನ್ನು ಒಪ್ಪಿತು.</td></tr>
<tr><td></td><td>B) ದಿನಾಂಕ 29.05.2026 ರ ವಿಶೇಷ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ</td></tr>
<tr><td></td><td>ದಿನಾಂಕ 29.05.2026ರ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯಗಳ ಮೇಲೆ ಜರುಗಿದ ಸಂಕ್ಷಿಪ್ತ ವರದಿಯನ್ನು ಅನುಮೋದಿಸಲಾಯಿತು</td></tr>
<tr><td></td><td>C) ದಿನಾಂಕ 29.06.2026 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.</td></tr>
<tr><td></td><td>ದಿನಾಂಕ 29.06.2026ರ ಸಾಮಾನ್ಯ ಸಿಂಡಿಕೇಟ್ ಸಭೆಯ ನಡುವಳಿ ಸಂಖ್ಯೆ 21 ರಿಂದ 23ರ ವಿಷಯದ ಕುರಿತು ಚರ್ಚಿಸಿ, ಈಗಾಗಲೇ ಜುಲೈ 2026ರಿಂದ ಪರಿಷ್ಕೃತ ವೇತನ ಪಾವತಿಸಲು ನಿರ್ಧರಿಸಿದ್ದು, ಸರ್ಕಾರದಿಂದ ಪಾಲಿಕೆಗಳಿಗೆ ಹಾಗೂ ಆಡಿಟ್ ಕಚೇರಿಗಳಿಗೆ ಬಂದಿರುವ ಪತ್ರದ ಹಿನ್ನಲೆಯಲ್ಲಿ ಪತ್ರದ ಬಗ್ಗೆ ಪ್ರಾದೇಶಿಕ ಆಡಿಟ್ ಕಚೇರಿಯಿಂದ ಹಾಗೂ ಈಗಾಗಲೇ ವಿಶ್ವವಿದ್ಯಾಲಯದಲ್ಲಿ ಲೆಕ್ಕಪರಿಶೋಧನೆ ನಡೆಸುತ್ತಿರುವ ಲೆಕ್ಕಪರಿಶೋಧಕರಿಂದ ಸ್ಪಷ್ಟೀಕರಣ ಪಡೆದು, ಸದರಿ ಹೊರಗುತ್ತಿಗೆಯ 'ಸಿ', 'ಡಿ' ಮತ್ತು ಭದ್ರತಾ ಸಿಬ್ಬಂದಿಗಳಿಗೆ Arrears ದೊಂದಿಗೆ ಪಾವತಿಸಲು ನಿರ್ಣಯಿಸಲಾಯಿತು. ಮುಂದುವರೆದು ಉಳಿದ ಎಲ್ಲ ನಿರ್ಣಯಗಳನ್ನು ದೃಡೀಕರಿಸಿತು.</td></tr>
<tr><td></td><td>D) ದಿನಾಂಕ 31.07.2026 ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.</td></tr>
<tr><td></td><td>ದಿನಾಂಕ 31.07.2026 ರ ವಿಶೇಷ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವಾಗ ನಿರ್ಣಯ ಸಂಖ್ಯೆ 05ನ್ನು ಈ ಕೆಳಗಿನಂತೆ ತಿದ್ದುಪಡೆ ಮಾಡಿ ಇನ್ನುಳಿದ ಎಲ್ಲ ನಿರ್ಣಯಗಳನ್ನು ಯಥಾವತ್ತಾಗಿ ಸಿಂಡಿಕೇಟ ದೃಢೀಕರಿಸಿತು.
<table>
<tr><th>ನಿರ್ಣಯ ಸಂಖ್ಯೆ</th><th>ದಾಖಲಾದ ನಿರ್ಣಯ</th><th>ತಿದ್ದುಪಡೆಯಾದ ನಿರ್ಣಯ</th></tr>
<tr><td>05</td><td>ಡಾ. ಜೆ. ಎಲ್. ರಾಠೋಡ ಇವರು ಮೈಸೂರು ನಗರದ ರೈಲ್ವೆ ಕೋ-ಅಪರೇಟಿವ್ ಬ್ಯಾಂಕ್ ನಿಯಮಿತ ಮೈಸೂರು, ಇಲ್ಲಿಯ ವಿವಿಧ ಹುದ್ದೆಗಳ ನೇಮಕಾತಿಯ ಕುರಿತಂತೆ ನಿಯಮಬಾಹಿರವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜರುಗಿಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಧಿಕಾರ ದುರ್ಬಳಕೆ</td><td>ಡಾ.ಜೆ.ಎಲ್. ರಾಠೋಡ ಇವರು ಮೈಸೂರು ನಗರದ ರೈಲ್ವೆ ಕೋ ಆಫ್ ರೇಟಿವ ಬ್ಯಾಂಕ ನಿಯಮಿತ ಮೈಸೂರು ಇಲ್ಲಿಯ ವಿವಿಧ ಹುದ್ದೆಗಳ ನೇಮಕಾತಿಯ ಕುರಿತಂತೆ ನಿಯಮಬಾಹಿರವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜರುಗಿಸಿ ನೇಮಕಾತಿ ಪ್ರಕ್ರಿಯೆಯಲ್ಲಿ ಅಧಿಕಾರ ದುರ್ಬಳಕೆ</td></tr>
</table></td></tr>
</table>

ಕುಲಸಚಿವರು



ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | ವಿಷಯ | | | |
|---|---|---|---|---|
| | | | ಮಾಡಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ಮಾಡಲಾದ ಕಾರಣ ಕೇಳುವ ನೋಟಿಸ್‌ಗೆ ಡಾ. ಜಿ. ಎಲ್. ರಾಠೋಡ ಇವರು ಸಲ್ಲಿಸಿದ ಲಿಖಿತ ವಿವರಣೆಯನ್ನು ಪರಿಶೀಲಿಸಿ, ಸದರಿಯವರಿಗೆ ಈಗಾಗಲೇ ಒಂದು ವರ್ಷ ಅಮಾನತ್ತು ಮಾಡಲಾಗಿದ್ದು, ಸದರಿಯವರಿಗೆ ಪಶ್ಚಾತ್ತಾಪವಾಗಿರುವುದು ಕಂಡು ಬರುತ್ತದೆ. ಸದರಿಯವರು ಅಧಿಕಾರ ದುರುಪಯೋಗ ಮಾಡಿರುವುದರಿಂದ ಎಚ್ಚರಿಕೆ ಪತ್ರ ನೀಡಿ, ಇನ್ನು ಮುಂದೆ ಸದರಿಯವರಿಗೆ ಯಾವುದೇ ಆಡಳಿತ ಹುದ್ದೆ ನೀಡಬಾರದೆಂದು ನಿರ್ಣಯಿಸಲಾಯಿತು. | ಮಾಡಿಕೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ಮಾಡಲಾದ ಕಾರಣ ಕೇಳುವ ನೋಟಿಸ್‌ಗೆ ಡಾ.ಜಿ.ಎಲ್. ರಾಠೋಡ ಇವರು ಸಲ್ಲಿಸಿದ ಲಿಖಿತ ವಿವರಣೆಯನ್ನು ಹಾಗೂ ವಿಚಾರಣಾ ಸಮಿತಿಯ ವರದಿಯನ್ನು ಪರಿಶೀಲಿಸಿ ಸದರಿಯವರಿಗೆ ಇನ್ನು ಮುಂದೆ ಯಾವುದೇ ಆಡಳಿತಾತ್ಮಕ ಹುದ್ದೆಗಳನ್ನು ನೀಡದಿರಲು ಹಾಗೂ ಈ ರೀತಿಯ ವರ್ತನೆಯು ಪುನರಾವರ್ತನೆಯಾಗದಂತೆ ಎಚ್ಚರಿಕೆ ಪತ್ರ ನೀಡುವದರ ಜೊತೆಗೆ ಸದರಿಯವರಿಗೆ ರೂ.2,00,000/- ಗಳ ದಂಡವನ್ನು ವಿಧಿಸಿ, ಸದರಿಯವರು ದಿನಾಂಕ: 30.01.2024 ರಂದು ಈ ಆಫೀಸ್ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜರುಗಿಸುವಲ್ಲಿ ಭಾಗವಹಿಸುವ ಕುರಿತು ಅನುಮತಿ ಕೋರಿರುವುದನ್ನು ಗಣನೆಗೆ ತೆಗೆದುಕೊಂಡು ಅವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ ಸಿಂಡಿಕೇಟ ಸಭೆಯು ನಿರ್ಣಯಿಸಿತು |
| 2) | ಶ್ರೀಮತಿ. ಸುಶೀಲವ್ವ ಬಿ. ಯರಿಹಕ್ಕಲ, ಕೂಲಿ/ಮಜದೂರ, ಅಕ್ಕಮಹಾದೇವಿ ಮಹಿಳಾ ವಸತಿ ನಿಲಯ, ಕ.ವಿ.ವಿ.ಧಾರವಾಡ ಇವರು ವೈಯಕ್ತಿಕ ಕಾರಣದಿಂದ ಕೆ.ಸಿ.ಎಸ್.ಆರ್. ನಿಯಮ 285ರ ಪ್ರಕಾರ ಸ್ವಯಂ ನಿವೃತ್ತಿಗೊಳಿಸಿ ಸೇವೆಯಿಂದ ಕಾರ್ಯ ವಿಮುಕ್ತಗೊಳಿಸುವ ವಿನಂತಿಯನ್ನು ಆಡಳಿತ ಮಂಡಳಿಯಲ್ಲಿ ಪರಿಶೀಲಿಸುವ ಕುರಿತು. | | | |
| **ನಿರ್ಣಯ** | ಶ್ರೀಮತಿ ಸುಶೀಲವ್ವ ಬಿ. ಯರಿಹಕ್ಕಲ, ಕೂ/ಮಜದೂರ, ಅಕ್ಕಮಹಾದೇವಿ ಮಹಿಳಾ ವಸತಿ ನಿಲಯ, ಕವಿವಿ, ಧಾರವಾಡ ಇವರು ವೈಯಕ್ತಿಕ ಕಾರಣದಿಂದ ಕೆ.ಸಿ.ಎಸ್.ಆರ್. ನಿಯಮ 285ರ ಪ್ರಕಾರ ಸ್ವಯಂ ನಿವೃತ್ತಿಗೊಳಿಸಿ ಸೇವೆಯಿಂದ ಕಾರ್ಯವಿಮುಕ್ತಗೊಳಿಸುವ ವಿನಂತಿಯನ್ನು ಚರ್ಚಿಸಲಾಗಿ, ನಿಯಮಾನುಸಾರ ಸ್ವಯಂ ನಿವೃತ್ತಿಯನ್ನು ಪಡೆಯಲು ಒಪ್ಪಿಗೆ ನೀಡಲಾಯಿತು. | | | |
| 3) | ಜುಲೈ-2026 ರಲ್ಲಿ ಸ್ನಾತಕೋತ್ತರ ಭೌತಶಾಸ್ತ್ರ, ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. | | | |
| **ನಿರ್ಣಯ** | ಜುಲೈ 2026 ರಲ್ಲಿ ಸ್ನಾತಕೋತ್ತರ ಭೌತಶಾಸ್ತ್ರ, ಮತ್ತು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಗಳಿಗೆ KSU Act 2000ರ 34 (5), (7) ಮತ್ತು (8) ಹಾಗೂ 15 (5) ರ ಪ್ರಕಾರ ಮುಖ್ಯಸ್ಥರುಗಳನ್ನು ನೇಮಕ ಮಾಡಿದ ಕ್ರಮವನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. | | | |
| 4) | 2017-18 ರಿಂದ 2025-26 ರ ವರೆಗೆ ಸಂಯೋಜನಾ ಶುಲ್ಕದ ಮೇಲೆ ಜಿ.ಎಸ್.ಟಿ. ಆಕರಣೆ ಮಾಡುವ ವಿಷಯವನ್ನು Joint Commissioner of Commercial Taxes, Dharwad ಇವರ ಆದೇಶದಂತೆ ಕೈಬಿಡುವ ಬಗ್ಗೆ, ಹಾಗೂ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಪಾವತಿಸಿದ ಜಿ.ಎಸ್.ಟಿ. ಶುಲ್ಕವನ್ನು ಮಹಾವಿದ್ಯಾಲಯಗಳಿಗೆ ಮರುಪಾವತಿಸುವ ವಿಷಯವನ್ನು ಚರ್ಚಿಸಲು ಸಿಂಡಿಕೇಟ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. | | | |

**ಕುಲಸಚಿವರು** **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| **ನಿರ್ಣಯ** | 2017-18 ರಿಂದ 2025-26ರವರೆಗೆ ಸಂಯೋಜನಾ ಶುಲ್ಕದ ಮೇಲೆ ಜಿಎಸ್‌ಟಿ ಆಕರಣೆ ಮಾಡುವ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕೈಬಿಡುವ ಬಗ್ಗೆ ಹಾಗೂ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಪಾವತಿಸಿದ ಜಿಎಸ್‌ಟಿ ಶುಲ್ಕವನ್ನು ಮಹಾವಿದ್ಯಾಲಯಗಳಿಗೆ ಮರುಪಾವತಿಸುವ ವಿಷಯವನ್ನು ಚರ್ಚಿಸಲಾಗಿ, 2017-18 ರಿಂದ 2025-26ರವರೆಗೆ GST ಕಟ್ಟಿದ ಹಣವನ್ನು ಪತ್ರ ಬರೆದು ಹಿಂಪಡೆಯಲು ಹಾಗೂ 2026-27ರಿಂದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಆಕರಿಸುವುದನ್ನು ಕೈಬಿಡಬೇಕೆಂದು ನಿರ್ಣಯಿಸಿತು. ಮುಂದುವರೆದು, ಈಗಾಗಲೇ GST ಪಾವತಿಸಿರುವ ಮಹಾವಿದ್ಯಾಲಯಗಳಿಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯ ಪ್ರಕರಣವು ಇತ್ಯರ್ಥವಾದ ನಂತರ ಮರುಪಾವತಿಸಲು ನಿರ್ಣಯಿಸಿತು. |
| 5) | ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ವಾಲ್ಮೀಕಿ ಅಧ್ಯಯನ ಪೀಠದ ದತ್ತಿ ನಿಧಿಯನ್ನು SBI ಬ್ಯಾಂಕಿನಲ್ಲಿ ಠೇವಣಿ ಇಡುವ ಸಲುವಾಗಿ "ಆದಿಕವಿ ಶ್ರೀ. ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠ" ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ SBI ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯುವ ಬಗ್ಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು ಪರಿಶೀಲಿಸುವ ಕುರಿತು. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯದ ಆದಿಕವಿ ವಾಲ್ಮೀಕಿ ಅಧ್ಯಯನ ಪೀಠದ ದತ್ತಿ ನಿಧಿಯನ್ನು SBIದಲ್ಲಿ ಠೇವಣಿ ಇಡುವ ಸಲುವಾಗಿ 'ಹಣಕಾಸು ಅಧಿಕಾರಿ – ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠ' ಎಂಬ ಹೆಸರಿನಲ್ಲಿ ಖಾತೆ ತೆರೆಯಲು ಸಭೆಯು ಒಪ್ಪಿಗೆ ನೀಡಿತು |
| 6) | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಪಿಂಚಣಿದಾರರಿಗೆ ರಾಜ್ಯ ಸರ್ಕಾರದಿಂದ ಸಂಪೂರ್ಣ ಪಿಂಚಣಿ ಅನುದಾನವನ್ನು ಒದಗಿಸಿ, K-2 State PFMS ಮಾಡ್ಯೂಲ್ ಮೂಲಕ ಪಿಂಚಣಿಯನ್ನು ನೇರವಾಗಿ ಪಾವತಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವ ಕುರಿತು ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ. |
| **ನಿರ್ಣಯ** | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಪಿಂಚಣಿದಾರರಿಗೆ ರಾಜ್ಯ ಸರ್ಕಾರದಿಂದ ಸಂಪೂರ್ಣ ಪಿಂಚಣಿ ಅನುದಾನವನ್ನು ಒದಗಿಸಿ, K-2 State PFMS ಮಾಡ್ಯೂಲ್ ಮೂಲಕ ಪಿಂಚಣಿಯನ್ನು ನೇರವಾಗಿ ಪಾವತಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವ ಕುರಿತು ಸರ್ಕಾರಕ್ಕೆ ಸಮಗ್ರ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದಿಸಿತು. ಮುಂದುವರೆದು, ಸಿಂಡಿಕೇಟ್ ಸದಸ್ಯರ ನಿಯೋಗ ಬೆಂಗಳೂರಿಗೆ ತೆರಳಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಈ ವಿಷಯದ ಬಗ್ಗೆ ಮನವರಿಕೆ ಮಾಡಿ, ಪಿಂಚಣಿ ಪಾವತಿಸಲು ಬೇಕಾದ ಹೆಚ್ಚಿನ ಮೊತ್ತವನ್ನು ವಿನಂತಿಸಲು ನಿರ್ಣಯಿಸಿತು. |
| 7) | ಮಾರ್ಚ-ಎಪ್ರಿಲ್ 2022ರಲ್ಲಿ ಜರುಗಿದ ಬಿ.ಎ 1ನೇ ಸೆಮಿಸ್ಟರ (ಎನ್.ಇ.ಪಿ) ಪರೀಕ್ಷೆ ಎಸ್.ಎಮ್.ಇ.ಎಸ್ ಅಬ್ದುಲ ಕಲಾಂ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಗದಗದಲ್ಲಿ ನಡೆದ Communication Skill ವಿಷಯದ ಫಲಿತಾಂಶ ಪ್ರಕಟಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸುವ ಕುರಿತು. |
| **ನಿರ್ಣಯ** | ಎಸ್.ಎಮ್.ಇ.ಎಸ್.ಅಬ್ದುಲ್ ಕಲಾಂ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಗದಗದಲ್ಲಿ ಜರುಗಿದ ಮಾರ್ಚ-ಎಪ್ರಿಲ್ 2022ರ ಬಿ.ಎ. 1ನೇ ಸೆಮಿಸ್ಟರ್ (ಎನ್‌ಇಪಿ) ಪರೀಕ್ಷೆಯ Communication Skill ವಿಷಯದ ಪರೀಕ್ಷಾ ಫಲಿತಾಂಶ ಪ್ರಕಟಿಸುವ ವಿಷಯವನ್ನು ಚರ್ಚಿಸಲಾಗಿ, ಕುಲಸಚಿವರು (ಮೌಲ್ಯಮಾಪನ) ಇವರು ಈ ವಿಷಯದ ಕುರಿತು ಪರೀಕ್ಷೆ ನಡೆದಿರುವ ಬಗ್ಗೆ, A Form, Attendance ಹಾಗೂ ಅಂಚೆ ಕಚೇರಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ವರದಿ |

ಕುಲಸಚಿವರು



ಕುಲಪತಿಗಳು

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| | ನೀಡಲು ತಿಳಿಸಲಾಯಿತು. |
| 8) | ಎಪ್ರೀಲ್-2022ರಲ್ಲಿ ಜರುಗಿದ ಬಿ.ಎ. 1ನೇ ಸೆಮಿಸ್ಟರ್ (NEP) ಪರೀಕ್ಷೆಗಳಲ್ಲಿ ತಾಜಸಮಿರ್ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗದಲ್ಲಿ ನಡೆದ Communication Skill ವಿಷಯದ ಉತ್ತರ ಪತ್ರಿಕೆಗಳು ಮೌಲ್ಯಮಾಪನ ಕೇಂದ್ರಕ್ಕೆ ಬಾರದೇ ಇರುವುದರಿಂದ ಮೌಲ್ಯಮಾಪನ ಆಗದೇ ಇರುವ ಕುರಿತು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| **ನಿರ್ಣಯ** | ತಾಜ್‌ಸಮಿರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಗದಗದಲ್ಲಿ ಜರುಗಿದ ಮಾರ್ಚ-ಎಪ್ರಿಲ್ 2022ರ ಬಿ.ಎ. 1ನೇ ಸೆಮಿಸ್ಟರ್ (ಎನ್‌ಇಪಿ) ಪರೀಕ್ಷೆಯ Communication Skill ವಿಷಯದ ಪರೀಕ್ಷಾ ಫಲಿತಾಂಶ ಪ್ರಕಟಿಸುವ ವಿಷಯವನ್ನು ಚರ್ಚಿಸಲಾಗಿ, ಕುಲಸಚಿವರು (ಮೌಲ್ಯಮಾಪನ) ಇವರು ಈ ವಿಷಯದ ಕುರಿತು ಪರೀಕ್ಷೆ ನಡೆದಿರುವ ಬಗ್ಗೆ, A Form, Attendance ಹಾಗೂ ಅಂಚೆ ಕಚೇರಿಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ವರದಿ ನೀಡಲು ತಿಳಿಸಲಾಯಿತು. |
| 9) | ದಿ: 15-06-2026 ರಂದು ಜರುಗಿದ ಆದಿಕವಿ ಪಂಪ ಅಧ್ಯಯನ ಪೀಠದ ಸಲಹಾ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸುವ ಕುರಿತು. |
| **ನಿರ್ಣಯ** | ದಿನಾಂಕ 15.06.2026ರಂದು ಜರುಗಿದ ಆದಿಕವಿ ಪಂಪ ಅಧ್ಯಯನ ಪೀಠದ ಸಲಹಾ ಸಮಿತಿಯ ನಡಾವಳಿಗಳನ್ನು ಅನುಮೋದಿಸಲಾಯಿತು. |
| 10) | 2026-27 & 2027-28 ನೇ ಸಾಲಿನ ಶೈಕ್ಷಣಿಕ ವರ್ಷಗಳಿಗಾಗಿ ವಿಶ್ವವಿದ್ಯಾಲಯದ ಎಲ್ಲ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕುರಿತು. |
| **ನಿರ್ಣಯ** | 2026-27 ಮತ್ತು 2027-28 ನೇ ಸಾಲಿನ ಶೈಕ್ಷಣಿಕ ವರ್ಷಗಳಿಗಾಗಿ ವಿಶ್ವವಿದ್ಯಾಲಯದ ಎಲ್ಲ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ರಾಜ್ಯದಲ್ಲಿ ಇತರ ವಿಶ್ವವಿದ್ಯಾಲಯಗಳಿಂದ ಪರೀಕ್ಷಾ ಶುಲ್ಕಗಳ ವಿವರಗಳನ್ನು ತರಿಸಿ, ಶುಲ್ಕ ಸಮಿತಿ ಮುಂದೆ ಇಟ್ಟು ಕ್ರಮಬದ್ಧವಾಗಿ ಎಲ್ಲ ಪರೀಕ್ಷಾ ಕಾರ್ಯಗಳಿಗೆ ಅನುಗುಣವಾಗಿ ಶುಲ್ಕಗಳನ್ನು ನಿಗದಿಪಡಿಸಲು ನಿರ್ಣಯಿಸಲಾಯಿತು. |
| 11) | ಉದಯವಾಣಿ "ಉತ್ತರ ಸಂಪದ" 80ನೇ ಸ್ವಾತಂತ್ರೋತ್ಸವ ವಿಶೇಷ ಸಂಚಿಕೆಗೆ ಜಾಹೀರಾತು ನೀಡುವ ಕುರಿತು. |
| **ನಿರ್ಣಯ** | ಉದಯವಾಣಿ 'ಉತ್ತರ ಸಂಪದ' 80ನೇ ಸ್ವಾತಂತ್ರೋತ್ಸವ ವಿಶೇಷ ಸಂಚಿಕೆಯಲ್ಲಿ ವಿಶ್ವವಿದ್ಯಾಲಯದ ಮಾಹಿತಿಯನ್ನು ಪ್ರಕಟಿಸಲು ರೂ. 15,000/- ಗಳಿಗೆ ಸೀಮಿತಗೊಳಿಸಿ ಜಾಹೀರಾತು ನೀಡಲು ಒಪ್ಪಲಾಯಿತು. |
| 12) | ಡಾ. ಬಿ. ಎಲ್. ಗುಂಡೂರು, ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಪ್ರಸ್ತಾವನೆ ಕುರಿತು |
| **ನಿರ್ಣಯ** | ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ನಕಲು/ ಅವ್ಯವಹಾರ ನಡೆಸಿದರೆ ಪ್ರಾಂಶುಪಾಲರಿಗೆ ದಂಡ ಹಾಕಲಾಗುತ್ತಿದೆ. ಪ್ರಾಂಶುಪಾಲರು ಯಾಕೆ ಈ ಶಿಕ್ಷೆ ಅನುಭವಿಸಬೇಕು ಎಂದು ಎಲ್ಲ ಪ್ರಾಂಶುಪಾಲರು ಕೇಳುತ್ತಿರುವ ವಿಷಯವನ್ನು ಡಾ. ಬಿ.ಎಲ್. ಗುಂಡೂರ, ಸಿಂಡಿಕೇಟ್ ಸದಸ್ಯರು ಸಲ್ಲಿಸಿದ ಪ್ರಸ್ತಾವನೆಯ ಅಂಶಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಸದರಿ ವಿಷಯದ ಬಗ್ಗೆ ಹಾಗೂ ಪರೀಕ್ಷಾ ನಿಯಮಾವಳಿಗಳ |

N. Ramesh

**ಕುಲಸಚಿವರು**  **ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
| --- | --- |
| | ಬಗ್ಗೆ ಚರ್ಚಿಸಲಾಗಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.<br>"ಕುಲಸಚಿವರು (ಮೌಲ್ಯಮಾಪನ) ರವರು ವಿನಿಯಮಾವಳಿಗಳಲ್ಲಿ ತಿದ್ದುಪಡಿ ಮಾಡಲು ಕ್ರಮವಹಿಸುವುದು. ಅಲ್ಲಿಯವರೆಗೆ ಪ್ರಾಂಶುಪಾಲರು ಅಥವಾ ಮಹಾವಿದ್ಯಾಲಯ/ ಸಂಸ್ಥೆಗಳಿಗೆ ದಂಡ ಹಾಕುವ ಬದಲಿಗೆ ನಕಲು/ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳಿಂದ ರೂ.5000/- ದಂಡ ಪಡೆದು ವಿಶ್ವವಿದ್ಯಾಲಯಕ್ಕೆ ಜಮೆ ಮಾಡಲು ಪ್ರಾಂಶುಪಾಲರಿಗೆ ತಿಳಿಸುವುದು.<br>ಹಾಗೆಯೇ Malpracticeಗಳಲ್ಲಿ Mass copying ಸರಿಯಾಗಿ ವ್ಯಾಖ್ಯಾನ ಮಾಡದಿರುವುದರಿಂದ ಈ ಗೊಂದಲ ಉಂಟಾಗಿರುತ್ತದೆ. ಆದುದರಿಂದ, ಒಂದು ಕಾಲೇಜಿನಲ್ಲಿ/ ಒಂದು ಪರೀಕ್ಷಾ ಕೊಠಡಿಯಲ್ಲಿ 25%ರಷ್ಟು ನಕಲು/ ಅವ್ಯವಹಾರ ನಡೆಯುತ್ತಿದ್ದಲ್ಲಿ ಅದನ್ನು Mass Copying ಎಂದು ಪರಿಗಣಿಸಿ ಆ ಕಾಲೇಜಿಗೆ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸುವುದು ಹಾಗೂ ರೂ.10,000/- ದಂಡ ವಿಧಿಸುವುದು ಎಂದು ನಿರ್ಣಯಿಸಲಾಯಿತು". |
| 13) | ಸೇವಾ ಸಕ್ರಮಾತಿಗೊಂಡ ಸಿಬ್ಬಂದಿಗಳ ಪೈಕಿ ಎಸ್.ಎಸ್ಎಲ್.ಸಿ. ಪಾಸಾದ ಸಿಬ್ಬಂದಿಗಳು ತಮಗೆ ಅರ್ಹತಾ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಿ ಪದೋನ್ನತಿ ಕೋರಿದ ವಿಷಯದ ಪರಿಶೀಲನೆ ಕುರಿತು ಪ್ರಸ್ತಾವನೆ. |
| **ನಿರ್ಣಯ** | ಸೇವಾ ಸಕ್ರಮಾತಿಗೊಂಡ ಸಿಬ್ಬಂದಿಗಳ ಪೈಕಿ ಎಸ್.ಎಸ್.ಎಲ್.ಸಿ. ಪಾಸಾದ ಸಿಬ್ಬಂದಿಗಳು ತಮಗೆ ಅರ್ಹತಾ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಪರಿಗಣಿಸಿ ಪದೋನ್ನತಿ ಕೋರಿದ ವಿಷಯದ ಬಗ್ಗೆ ಇರುವ ಎಲ್ಲ ಕಡತಗಳನ್ನು ಕಾನೂನು ಸಲಹೆಗಾರರಿಗೆ ಒಪ್ಪಿಸಿ, ಅವರಿಂದ ಕಾನೂನು ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು. |
| 14) | ಶ್ರೀಮತಿ. ಕೀರ್ತಿ ಎನ್. ಎಲೆಬಳ್ಳಿ ಇವರನ್ನು ಅನುಕಂಪದ ಆಧಾರದ ಮೇಲೆ ಸಿಪಾಯಿ (ಗ್ರೂಪ್ 'ಡಿ) ಹುದ್ದೆಗೆ ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆ ಪರಿಶೀಲಿಸುವ ಕುರಿತು. |
| **ನಿರ್ಣಯ** | ಶ್ರೀಮತಿ ಕೀರ್ತಿ ಎನ್. ಎಲೆಬಳ್ಳಿ ಇವರನ್ನು ಅನುಕಂಪದ ಆಧಾರದ ಮೇಲೆ ಸಿಪಾಯಿ (ಗ್ರೂಫ-ಡಿ) ಹುದ್ದೆಗೆ ನೇಮಕಾತಿ ಮಾಡುವ ವಿಷಯವನ್ನು ಚರ್ಚಿಸಲಾಗಿ, ಕುಲಸಚಿವರು (ಮೌಲ್ಯಮಾಪನ) ಹಾಗೂ ಹಣಕಾಸು ಅಧಿಕಾರಿಯವರು ಸದರಿಯವರು ನಿಧನ ಹೊಂದಿದವರ ಅವಲಂಬಿತರೋ ಇಲ್ಲವೋ ಮತ್ತು ಮದುವೆಯಾದವರಿಗೆ ನೀಡಬಹುದೇ ಎಂದು ಪರಿಶೀಲಿಸಿ ಮುಂದಿನ ಕ್ರಮಕ್ಕಾಗಿ ವರದಿ ಸಲ್ಲಿಸಲು ನಿರ್ಣಯಿಸಲಾಯಿತು. |
| 15) | ಎಂ.ಬಿ.ಎ. ಕೋರ್ಸಿನ ನೊಂದಣಿ ಶುಲ್ಕದ ವಿಷಯವಾಗಿ ಮರುಪರಿಶೀಲಿಸುವ ಕುರಿತು. |
| **ನಿರ್ಣಯ** | ಎಂ.ಬಿ.ಎ. ಕೋರ್ಸಿನ ನೋಂದಣಿ ಶುಲ್ಕದ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿ, ಒಮ್ಮೆ ನಿಗದಿಪಡಿಸಿದ ಶುಲ್ಕವನ್ನು ಕಡಿಮೆ ಮಾಡುವುದರಿಂದ ಲೆಕ್ಕಪರಿಶೋಧನೆ ಆಕ್ಷೇಪಣೆಗಳಾಗುವ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ವರ್ಷವು ಕಳೆದ ವರ್ಷ ನಿಗದಿಯಾದ ರೂ.22,225/-ಗಳನ್ನು ವಿಶೇಷ ನೆಲೆಯಲ್ಲಿದ್ದು, ಮುಂದುವರೆಸಿ, ಮುಂದಿನ ವರ್ಷದಿಂದ 10% ಹೆಚ್ಚಿಸಲು ನಿರ್ಣಯಿಸಿತು. |

N. Ramesh 27/8/26
**ಕುಲಸಚಿವರು**



**ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
| --- | --- |
| 16) | ಪೂರ್ಣಾವಧಿ ಅತಿಥಿ ಉಪನ್ಯಾಸಕರುಗಳು, ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಸಲ್ಲಿಸಿದ ಅರ್ಜಿಯಂತೆ ಮಾನ್ಯ ಉಚ್ಚನ್ಯಾಯಾಲಯದಿಂದ ಬಂದ ತೀರ್ಪಿನಂತೆ ಸಿಂಡಿಕೇಟ ಸಭೆಯಲ್ಲಿ ಪರಿಶೀಲಿಸುವ ಕುರಿತು. |
| **ನಿರ್ಣಯ** | ಪೂರ್ಣಾವಧಿ ಅತಿಥಿ ಉಪನ್ಯಾಸಕರು, ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಸಲ್ಲಿಸಿದ ಅರ್ಜಿಯಂತೆ ಮಾನ್ಯ ಉಚ್ಚನ್ಯಾಯಾಲಯದಿಂದ ಬಂದ ತೀರ್ಪಿನಂತೆ ಸದರಿಯವರ ಮನವಿಯನ್ನು ಪರಿಗಣಿಸಿ, ಮಾನ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಲಗತ್ತಿಸಿ, ಸರ್ಕಾರಕ್ಕೆ ಪತ್ರ ಬರೆದು ಅವರ ಸೇವೆ ಖಾಯಂಗೊಳಿಸುವ ಬಗ್ಗೆ ಮಾರ್ಗದರ್ಶನ/ ಅನುಮತಿ ಪಡೆಯಲು ನಿರ್ಣಯಿಸಲಾಯಿತು. |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬಂದ ವಿಷಯಗಳು** |
| 17 | ಕುಲಸಚಿವರು (ಪ) ಅವರು ಅಂಕಪಟ್ಟಿಗಳನ್ನು ಮುದ್ರಿಸಲು ಪ್ರಿಂಟರ್ ಖರೀದಿಸಲು ಅನುಮತಿ ಕೋರಿದ ಕುರಿತು |
| **ನಿರ್ಣಯ** | ಕುಲಸಚಿವರು (ಪ) ಅವರು ಅಂಕಪಟ್ಟಿಗಳನ್ನು ಮುದ್ರಿಸಲು ಪ್ರಿಂಟರ್ ಖರೀದಿಸಲು ಅನುಮತಿ ಕೋರಿದ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅಂಕಪಟ್ಟಿಗಳನ್ನು ತ್ವರಿತವಾಗಿ ಮುದ್ರಿಸಲು ಅವಶ್ಯವಿರುವ ಪ್ರಿಂಟರನ್ನು ನಿಯಮಾನುಸಾರ ಇ-ಟೆಂಡರ್ ಮೂಲಕ ಹೊಸ ಪ್ರಿಂಟರ್‌ನ್ನು ಖರೀದಿಸಲು ಅನುಮತಿ ನೀಡಲಾಯಿತು. |
| 18. | ವಿಶ್ವವಿದ್ಯಾಲಯಕ್ಕೆ ಒಬ್ಬ ದೈಹಿಕ ಶಿಕ್ಷಣ ನಿರ್ದೇಶಕರನ್ನು ಸರ್ಕಾರದ ನಿಯೋಜನೆಯ ಕುರಿತು ಶ್ರೀ ರಾಬರ್ಟ್ ದದ್ದಾಪುರಿ, ಸಿಂಡಿಕೇಟ್ ಸದಸ್ಯರು ಅವರು ಸಲ್ಲಿಸಿದ ವಿಷಯದ ಕುರಿತು |
| **ನಿರ್ಣಯ** | ವಿಶ್ವವಿದ್ಯಾಲಯಕ್ಕೆ ಒಬ್ಬ ದೈಹಿಕ ಶಿಕ್ಷಣ ನಿರ್ದೇಶಕರನ್ನು ಸರ್ಕಾರದ ನಿಯೋಜನೆಯ ಕುರಿತು ಶ್ರೀ ರಾಬರ್ಟ್ ದದ್ದಾಪುರಿ, ಸಿಂಡಿಕೇಟ್ ಸದಸ್ಯರು ಅವರು ಸಲ್ಲಿಸಿದ ವಿಷಯವನ್ನು ಸಭೆಯಲ್ಲಿ ಸಮಾಲೋಚಿಸಿ, ಈ ವಿಷಯದ ಕುರಿತು ಸರ್ಕಾರಕ್ಕೆ ಪತ್ರ ಬರೆದು, ಈಗಾಗಲೇ ಬಂದಿರುವ ಎರಡು ಅರ್ಜಿಗಳಲ್ಲಿ ಯಾರನ್ನು ನಿಯೋಜನೆ ಮೇರೆಗೆ ಪಡೆಯಬಹುದೆಂದು ಮಾರ್ಗದರ್ಶನ ಪಡೆದು ಮುಂದಿನ ಕ್ರಮವಹಿಸಬಹುದು ಎಂದು ತೀರ್ಮಾನಿಸಲಾಯಿತು. |
| **19** | ಮಹಿಳಾ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಬಾಕಿ ವೇತನ / ವೇತನವನ್ನು ಮಂಜೂರು ಮಾಡಲು ಶ್ರೀ ಶ್ಯಾಮ ಮಲ್ಲನಗೌಡರ, ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ. |
| **ನಿರ್ಣಯ** | ಮಹಿಳಾ ಅಧ್ಯಯನ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಬಾಕಿ ವೇತನ / ವೇತನವನ್ನು ಪಾವತಿಸುವ ಕುರಿತು ಹಣಕಾಸು ಅಧಿಕಾರಿ, ನಿಕಟಪೂರ್ವ ಮತ್ತು ಹಾಲಿ ನಿರ್ದೇಶಕರು ಚರ್ಚಿಸಿ, ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ವಹಿಸಬೇಕೆಂದು ನಿರ್ಣಯಿಸಿತು. |
| **20** | ಕವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದಲ್ಲಿ 03 ವರ್ಷ ಮತ್ತು 05 ವರ್ಷ ಹಾಗೂ ಸ್ನಾತಕೋತ್ತರ ಕಾರ್ಯಕ್ರಮ ನಡೆಸುವ ಕುರಿತು ಶ್ರೀ ರಾಬರ್ಟ ದದ್ದಾಪುರಿ, ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ. |
| **ನಿರ್ಣಯ** | ಕವಿವಿಯ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದಲ್ಲಿ 03 ವರ್ಷ ಮತ್ತು 05 ವರ್ಷ ಹಾಗೂ ಸ್ನಾತಕೋತ್ತರ ಕಾರ್ಯಕ್ರಮ ನಡೆಸುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಈ ಕುರಿತು ಎಲ್ಲ stakeholders ಜೊತೆಗೆ ಚರ್ಚಿಸಿ, ಸಂಬಂಧಪಟ್ಟವರಿಂದ ವರದಿ ಪಡೆದು, ಮುಂದಿನ ಕ್ರಮವಹಿಸಬೇಕೆಂದು ನಿರ್ಣಯಿಸಿತು. |

N. Rommel

**ಕುಲಸಚಿವರು**

**ಕುಲಪತಿಗಳು**

| ಕಾರ್ಯಸೂಚಿ ಸಂಖ್ಯೆ | ವಿಷಯ |
|---|---|
| 21 | ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಿಬ್ಬಂದಿಗಳ ನೇಮಕಾತಿಗಾಗಿ ಅಧಿಸೂಚನೆಗಳನ್ನು ಹೊರಡಿಸಿ, ಅರ್ಧದಲ್ಲಿ ನಿಲ್ಲಿಸಿರುವ ಪ್ರಕ್ರಿಯೆಗಳ ಬಗ್ಗೆ ಶ್ರೀ ಬಸವರಾಜ ಗೋರವರ, ಸಿಂಡಿಕೇಟ್ ಸದಸ್ಯರು ಇವರ ಪ್ರಸ್ತಾವನೆ. |
| ನಿರ್ಣಯ | ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಿಬ್ಬಂದಿಗಳ ನೇಮಕಾತಿಗಾಗಿ ಹೊರಡಿಸಿದ ಅಧಿಸೂಚನೆಗಳ ಪ್ರಕ್ರಿಯೆಯು ಅರ್ಧದಲ್ಲಿ ನಿಲ್ಲಿಸಿರುವ ಕುರಿತು ಸಭೆಯಲ್ಲಿ ಸವಿಸ್ತಾರವಾಗಿ ಚರ್ಚಿಸಿ, ಈ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು DPAR / BOA ವಿಭಾಗಗಳಿಂದ ಪಡೆದು, ಮುಂಬರುವ ಸಿಂಡಿಕೇಟ್‌ದಲ್ಲಿ ಮುಂದಿನ ಯಾವ ಕ್ರಮವಹಿಸಬೇಕೆಂದು ನಿರ್ಣಯಿಸಲು ಕಲಂ ಮಂಡಿಸಬೇಕೆಂದು ನಿರ್ಣಯಿಸಿತು. |
| 22 | ಶ್ರೀಮತಿ ಎ.ಬಿ. ಕಾಂಬಳೆ, ನಿವೃತ್ತ ಶಿಕ್ಷಕೇತರ ಸಿಬ್ಬಂದಿ ಇವರು ಸಲ್ಲಿಸಿದ ಮನವಿ ಕುರಿತು |
| ನಿರ್ಣಯ | ಶ್ರೀಮತಿ ಎ.ಬಿ. ಕಾಂಬಳೆ, ನಿವೃತ್ತ ಶಿಕ್ಷಕೇತರ ಸಿಬ್ಬಂದಿ ಇವರು ಸಲ್ಲಿಸಿದ ಮನವಿಯನ್ನು ಸಭೆಯಲ್ಲಿ ಚರ್ಚಿಸಲಾಗಿ, ವಿಶ್ವವಿದ್ಯಾಲಯದಲ್ಲಿ ಇಂಥವುದೇ ಪ್ರಕರಣವಿದ್ದಾಗ ತಾರತಮ್ಯವೆಸಗದೆ ಡಾ. ಎಸ್.ಬಿ. ಕಾಂಬಳೆ ಅವರನ್ನು ಪೋಲೀಸ್ ವರದಿ ಬರುವ ಮೊದಲು dismiss ಮಾಡಿದ್ದು ತಪ್ಪಾಗುತ್ತದೆ ಎಂದು ಚರ್ಚಿಸಿ, ಮಾನವಿಯ ನೆಲೆಯಲ್ಲಿ ಸದರಿಯವರು ನಿಯಮಾನುಸಾರ ಬರಬೇಕಾದ ಹಕ್ಕನ್ನು ಕೇಳುತ್ತಿರುವುದರಿಂದ, ಅವರ ಮನವಿಯ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ವಹಿಸಬೇಕೆಂದು ತೀರ್ಮಾನಿಸಿತು. |
| 23 | ಪ್ರೊ. ಎಸ್.ಕೆ. ಪವಾರ, ನಿವೃತ್ತ ಹಿಂದಿ ಪ್ರಾಧ್ಯಾಪಕರು, ಅವರನ್ನು ಸ್ನಾತಕೋತ್ತರ ಹಿಂದಿ ವಿಭಾಗದಲ್ಲಿ Adjunct Professor ಎಂದು ನೇಮಿಸುವ ಕುರಿತು |
| ನಿರ್ಣಯ | ಪ್ರೊ. ಎಸ್.ಕೆ. ಪವಾರ, ನಿವೃತ್ತ ಹಿಂದಿ ಪ್ರಾಧ್ಯಾಪಕರು, ಅವರನ್ನು ಸ್ನಾತಕೋತ್ತರ ಹಿಂದಿ ವಿಭಾಗದಲ್ಲಿ Adjunct Professor ಎಂದು ನೇಮಿಸುವ ವಿಷಯವನ್ನು ಚರ್ಚಿಸಲಾಗಿ, ವಿಶ್ವವಿದ್ಯಾಲಯದ ನಿಯಮಾನುಸಾರ Adjunct Professor ಎಂದು ನೇಮಿಸಲು ಅನುಮೋದಿಸಲಾಯಿತು. |
| 24 | ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಕೋಶದ ಉಪಕುಲಸಚಿವರಾದ ಶ್ರೀ ಶ್ರೀಧರ ಬಿ. ಭಜಂತ್ರಿ ಇವರು ಕಚೇರಿಗೆ ಬಾರದೆ ಇರುವುದನ್ನು ಗಮನಿಸಿದ ಕುರಿತು |
| ನಿರ್ಣಯ | ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಕೋಶದ ಉಪಕುಲಸಚಿವರಾದ ಶ್ರೀ ಶ್ರೀಧರ ಬಿ. ಭಜಂತ್ರಿ ಇವರು ಕಚೇರಿಗೆ ಬಾರದೆ ಇರುವ ವಿಷಯವನ್ನು ಗಮನಿಸಿದ ಸಿಂಡಿಕೇಟ್ ಸದರಿಯವರು ಪದೇ ಪದೇ ಬೇರೆ ಬೇರೆ ಕಾರಣಗಳನ್ನು ಕೊಟ್ಟು ವಿಶ್ವವಿದ್ಯಾಲಯದ ಕೆಲಸವನ್ನು ತಪ್ಪಿಸಿ ಓಡಾಡುತ್ತಿರುವುದನ್ನು ಚರ್ಚಿಸಲಾಗಿ, ಸದರಿಯವರಿಗೆ ಯಾಕೆ ಅಮಾನತುಗೊಳಿಸಬಾರದು ಎಂದು ಕಾರಣ ಕೇಳುವ ನೋಟೀಸ್ ನೀಡಬೇಕೆಂದು ನಿರ್ಣಯಿಸಿತು. |

ಕುಲಸಚಿವರು

ಕುಲಪತಿಗಳು